2017 ಕ.ತೀ.ವ 376

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಡಾ॥ ವಿನೀತ್ ಕೊಠಾರಿ

**ಶ್ರೀ ವಿ. ದಾಮೋದರನ್ ಮತ್ತು ಇತರರು –ವಿರುದ್ಧ– ಬಿ.ಬಿ.ಎಂ.ಪಿ. ಹಾಗೂ ಇತರರು***

**ಭಾರತ ಸಂವಿಧಾನ ಅನುಚ್ಛೇದ 226 ಹಾಗೂ 227ರಡಿಯಲ್ಲಿ ರಿಟ್ ಅರ್ಜಿ.**

**1ನೇ ಎದುರುದಾರರ ಅನುಕೂಲಕ್ಕೆ ತಕ್ಕಂತೆ 8 ಮತ್ತು 9ನೇ ಎದುರುದಾರರು ಬರೆದ ತ್ಯಾಗಪತ್ರವನ್ನು ಹೊಡೆದುಹಾಕುವಂತೆ ಕೋರಿ ಸದರಿ ರಿಟ್ ಅರ್ಜಿ.**

**ಸದರಿ ಪ್ರಕರಣದ ಯೋಗ್ಯಾಯೋಗ್ಯತೆಗಳನ್ನು ಬಿಬಿಎಂಪಿ ಮತ್ತು ಬಿಡಿಎ ಪ್ರಾಧಿಕಾರಗಳಂತಹ ಪ್ರಾಧಿಕಾರವು ನಿರ್ಧರಿಸಬೇಕಿದ್ದು, ಅವರು ತೆಗೆದುಕೊಳ್ಳುವಂಥ ನಿರ್ಧಾರಗಳಿಂದ ಅರ್ಜಿದಾರರು ಬಾಧಿತರಾದಲ್ಲಿ ಅಂತಹ ತೀರ್ಮಾನಗಳನ್ನು ಅರ್ಜಿದಾರರು ನ್ಯಾಯಾಧಿಕರಣದಲ್ಲಿ ಪ್ರಶ್ನಿಸಬಹುದಾಗಿದೆಯೆಂದು ಅಭಿಪ್ರಾಯಪಟ್ಟ ಉಚ್ಚ ನ್ಯಾಯಾಲಯವು ಸದರಿ ರಿಟ್ ಅರ್ಜಿಗಳನ್ನು ವಜಾಗೊಳಿಸಿದೆ.**

ಅರ್ಜಿದಾರರ ಪರ: ಶ್ರೀ ಶ್ರೀಕರ ಪಿ.ಕೆ. ವಕೀಲರು–ಇವರ ಪರವಾಗಿ ಶ್ರೀ ಎಸ್.ಆರ್. ಕೃಷ್ಣ ಕುಮಾರ್.
1 ರಿಂದ 7ರ ವರೆಗಿನ ಪ್ರತ್ಯರ್ಜಿದಾರರ ಪರ: ಶ್ರೀ ಎಸ್.ಜೆ. ಪುರಾಣಿಕ್, ವಕೀಲರು.
8 ಮತ್ತು 9ರ ವರೆಗಿನ ಪ್ರತ್ಯರ್ಜಿದಾರರ ಪರ: ಶ್ರೀ ನಿಶಾಂತ್, ಎ.ವಿ., ವಕೀಲರು.
10ನೇ ಪ್ರತ್ಯರ್ಜಿದಾರರ ಪರ: ಶ್ರೀ ಎಸ್.ಜಿ. ಹೆಗ್ಡೆ, ವಕೀಲರು;
11ನೇ ಪ್ರತ್ಯರ್ಜಿದಾರರ ಪರ: ಮೆಸರ್ಸ್ ಶ್ರೀವತ್ಸ ಅಸೋಸಿಯೇಟ್ಸ್;
12ನೇ ಪ್ರತ್ಯರ್ಜಿದಾರರ ಪರ: ಶ್ರೀ ಎಸ್. ವೆಂಕಟೇಶ್ವರ ಬಾಬು, ವಕೀಲರು.
13ನೇ ಪ್ರತ್ಯರ್ಜಿದಾರರ ಪರ: ಶ್ರೀ ಕೆ. ಕೃಷ್ಣ, ವಕೀಲರು.

*ರಿಟ್ ಅರ್ಜಿ ಸಂಖ್ಯೆ: 3881–3883/2014 (ಎಲ್‌ಬಿ–ಬಿಎಂಪಿ), ದಿನಾಂಕ: 28ನೇ ನವೆಂಬರ್, 2016.

14ನೇ ಪ್ರತ್ಯರ್ಜಿದಾರರ ಪರ: ಕು. ವನಿತಾ, ವಕೀಲರು.
17ನೇ ಪ್ರತ್ಯರ್ಜಿದಾರರ ಪರ: ಶ್ರೀ ಕೆ.ಬಿ. ಮೊನೇಶ್ ಕುಮಾರ್, ವಕೀಲರು.
18ನೇ ಪ್ರತ್ಯರ್ಜಿದಾರರ ಪರ: ಜೋಶುವಾ ಸ್ಯಾಮ್ಯುಯಲ್, ವಕೀಲರು.
15 ಮತ್ತು 16ನೇ ಪ್ರತ್ಯರ್ಜಿದಾರರಿಗೆ ನೋಟೀಸು ನೀಡಲಾಗಿದೆ.

## ಆಜ್ಞೆ

**ನ್ಯಾಯಮೂರ್ತಿ ಶ್ರೀ ಡಾ: ವಿನೀತ್ ಕೊಠಾರಿ:**

ಈ ರಿಟ್ ಅರ್ಜಿಗಳನ್ನು ಶ್ರೀ ವಿ. ಧಾಮೋದರನ್, ಶ್ರೀ ಕೆ. ಶ್ರೀನಿವಾಸ ರೆಡ್ಡಿ ಮತ್ತು ಶ್ರೀ ಎಸ್.ಎಂ. ಶಿವಕುಮಾರ್ ಎಂಬ ಮೂವರು ವ್ಯಕ್ತಿಗಳು ಸಲ್ಲಿಸಿದ್ದಾರೆ. ಇವರು ಆಕ್ರಮ ಕಟ್ಟಡ/ನಿರ್ಮಾಣಗಳನ್ನು ಕೆಡವಿ ಹಾಕುವ ಮತ್ತು ನಿರ್ನಾಮಗೊಳಿಸುವ ಕಾರ್ಯ ಚಾಲನೆಯಲ್ಲಿ ತೊಡಗಿರುವುದಾಗಿ ಕಂಡುಬರುತ್ತದೆ. ಇವರು 18 ಮಂದಿ ಪ್ರತ್ಯರ್ಜಿದಾರರ ವಿರುದ್ಧ ಸ್ವಚ್ಛತಾ ಕಾರ್ಯದ ಚಾಲನೆಗಾಗಿ ಸಾರ್ವಜನಿಕ ಕಾರಣದ ಚಾಂಪಿಯನ್ನರಾಗಲು ಕ್ಲೇಮು ಮಾಡಿದ್ದು, ಆ ಪ್ರತ್ಯರ್ಜಿದಾರರಲ್ಲಿ ಕೆಲವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ), ಪಟ್ಟಣ ಯೋಜನೆಯ ಸಹಾಯಕ ನಿರ್ದೇಶಕರು, ಬಿಬಿಎಂಪಿ ಉಪ–ಆಯುಕ್ತರು, ಬಿಬಿಎಂಪಿ ಜಂಟಿ ಆಯುಕ್ತರಾಗಿದ್ದು, ಉಳಿದವರು ಖಾಸಗಿ ಪಕ್ಷಕಾರರು ಎಂದರೆ, ಯಾರ ಕಟ್ಟಡ ನಿರ್ಮಾಣಗಳ ವಿರುದ್ಧ ಅರ್ಜಿದಾರರು ಹಲವಾರು ಉಲ್ಲಂಘನೆಗಳನ್ನು ಮಾಡಿದ್ದಾರೆಯೋ ಆ ನಿರ್ಮಾಣಕಾರರಾಗಿದ್ದಾರೆ ಮತ್ತು ಮೇಲೆ ಹೇಳಿದ ರಿಟ್ ಅರ್ಜಿಗಳಲ್ಲಿ ಈ ಮುಂದಿನ ಪರಿಹಾರಗಳನ್ನು ಕ್ಲೇಮು ಮಾಡಲಾಗಿದೆ:–

> *"ಎ) ಸರ್ಷಿಯೋರರಿ ರಿಟ್ ಅಥವಾ ಸಂದರ್ಭಾನುಸಾರ ಯಾವುದೇ ಇತರ ಸೂಕ್ತ ರಿಟ್ ಅಥವಾ ನಿರ್ದೇಶನವನ್ನು ನೀಡುವ ಮೂಲಕ ಅಕ್ರಮ, ತಪ್ಪುಕಲ್ಪನೆ, ಅಸಿಂಧು, ಅಕೃತ ಮತ್ತು ಆರಂಭದಿಂದಲೇ ಶೂನ್ಯ ಎಂಬ ಕಾರಣಕ್ಕಾಗಿ, 1ನೇ ಪ್ರತ್ಯರ್ಜಿದಾರನ ಪರವಾಗಿ,*

*8 ಮತ್ತು 9ನೇ ಪ್ರತ್ಯರ್ಜಿದಾರರು ಬರೆದುಕೊಟ್ಟ ಅನುಬಂಧ–ಎಂ ರಲ್ಲಿನ ದಿನಾಂಕ 4.5.2012ರ ಪ್ರಶ್ನಿತ* ***ತ್ಯಾಗಪತ್ರವನ್ನು ರದ್ದುಪಡಿಸುವುದು;***

*ಬಿ) ಸರ್ಷಿಯೋರರಿ ರಿಟ್ ಅಥವಾ ಸಂದರ್ಭಾನುಸಾರ ಯಾವುದೇ ಇತರ ಸೂಕ್ತ ರಿಟ್ ಅಥವಾ ನಿರ್ದೇಶನವನ್ನು ನೀಡುವ ಮೂಲಕ ಅಕ್ರಮ, ತಪ್ಪುಕಲ್ಪನೆ, ಅಸಿಂಧು, ಅಕೃತ ಮತ್ತು ಆರಂಭದಿಂದಲೇ ಶೂನ್ಯ ಎಂಬ ಕಾರಣಕ್ಕಾಗಿ, 4ನೇ ಪ್ರತ್ಯರ್ಜಿದಾರನು ನೀಡಿದ ಅನುಬಂಧ – ಪಿ ಯಲ್ಲಿನ* ***ದಿನಾಂಕ 4.5.2012ರ ಅಧಿಕೃತ ಜ್ಞಾಪನಪತ್ರವನ್ನು*** *ರದ್ದುಪಡಿಸುವುದು.*

*ಸಿ) ಸರ್ಷಿಯೋರರಿ ರಿಟ್ ಅಥವಾ ಸಂದರ್ಭಾನುಸಾರ ಯಾವುದೇ ಇತರ ಸೂಕ್ತ ರಿಟ್ ಅಥವಾ ನಿರ್ದೇಶನವನ್ನು ನೀಡುವ ಮೂಲಕ* ***1 ರಿಂದ 3 ರ ವರೆಗಿನ ಪ್ರತ್ಯರ್ಜಿದಾರರು*** *ನೀಡಿದ ದಿನಾಂಕ 20.7.2012ರ ಎಲ್.ಪಿ.ಸಂಖ್ಯೆ ಎನ್‌ಎವೈಒ/ಎಂಎವಿಎ/ಕಮಿಟಿ/123/2012–13ನ್ನು ಹೊಂದಿರುವ ಅನುಬಂಧ–ಕ್ಯೂ 1 ರಲ್ಲಿನ ಮಂಜೂರಾದ ಪ್ರಶ್ನಿತ ಕಟ್ಟಡದ ವಿನ್ಯಾಸವನ್ನು ಹಾಗೂ ದಿನಾಂಕ 20.7.2012ರ ಅನುಬಂಧ ಆರ್.1 ರಲ್ಲಿನ ಸಂವಾದಿ ಲೈಸೆನ್ಸನ್ನು ರದ್ದುಪಡಿಸುವುದು.*

*(ಡಿ) ಸರ್ಷಿಯೋರರಿ ರಿಟ್ ಅಥವಾ ಸಂದರ್ಭಾನುಸಾರ ಯಾವುದೇ ಇತರ ಸೂಕ್ತ ರಿಟ್ ಅಥವಾ ನಿರ್ದೇಶನವನ್ನು ನೀಡುವ ಮೂಲಕ 1 ರಿಂದ 3 ರ ವರೆಗಿನ ಪ್ರತ್ಯರ್ಜಿದಾರರು ನೀಡಿದ ದಿನಾಂಕ 8.11.2012ರ ಎಲ್‌ಪಿ.ಸಂಖ್ಯೆ ಎನ್‌ಎವೈಒ/ಎಂಎವಿಎ/ಕಮಿಟಿ/230/2012–13ನ್ನು ಹೊಂದಿರುವ ಅನುಬಂಧ ಕ್ಯೂ–2 ರಲ್ಲಿನ* ***ಮಂಜೂರಾದ ಪ್ರಶ್ನಿತ*** *ಕಟ್ಟಡದ ವಿನ್ಯಾಸವನ್ನು ರದ್ದುಪಡಿಸುವುದು.*

*(ಇ) ಸರ್ಷಿಯೋರರಿ ರಿಟ್ ಅಥವಾ ಸಂದರ್ಭಾನುಸಾರ ಯಾವುದೇ ಇತರ ಸೂಕ್ತ ರಿಟ್ ಅಥವಾ ನಿರ್ದೇಶನವನ್ನು ನೀಡುವ ಮೂಲಕ*

*1 ರಿಂದ 3 ರ ವರೆಗಿನ ಪ್ರತ್ಯರ್ಜಿದಾರರು ನೀಡಿದ ದಿನಾಂಕ 30.4.2013ರ ಎಲ್‌ಪಿ.ಸಂಖ್ಯೆ.ಎನ್‌ಎವೈಒ/ಎಂಎವಿಎ/ಕಮಿಟಿ/21/2012–13ನ್ನು ಹೊಂದಿರುವ ಅನುಬಂಧ ಕ್ಯೂ–3ರಲ್ಲಿನ ಮಂಜೂರಾದ ಪ್ರಶ್ನಿತ ಕಟ್ಟಡ ವಿನ್ಯಾಸವನ್ನು ದಿನಾಂಕ 30.4.2013ರ ಅನುಬಂಧ ಆರ್‌.3 ರಲ್ಲಿನ ಸಂವಾದಿ ಲೈಸೆನ್ಸ್‌ನನ್ನು ರದ್ದುಪಡಿಸುವುದು;*

*(ಎಫ್) ಮ್ಯಾಂಡಮಸ್ ರಿಟ್ ಅಥವಾ ಸಂದರ್ಭಾನುಸಾರ ಯಾವುದೇ ಇತರ ಸೂಕ್ತ ರಿಟ್ ಅಥವಾ ನಿರ್ದೇಶನ ನೀಡುವ ಮೂಲಕ ದಿನಾಂಕ 10.12.2013ರ ಅರ್ಜಿದಾರರ ಮನವಿಯಲ್ಲಿ ಕೋರಲಾದಂತೆ, ಬೆಂಗಳೂರು ಪೂರ್ವ ತಾಲ್ಲೂಕಿನ ವರ್ತೂರು ಹೋಬಳಿಯ ಕಸವನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ 8/2ನ್ನು ಹೊಂದಿರುವ ಜಮೀನಿನಲ್ಲಿ ಕಟ್ಟಲಾದ ಅಕ್ರಮ ಹಾಗೂ ಅನಧಿಕೃತ ಕಟ್ಟಡಗಳು/ನಿರ್ಮಾಣವನ್ನು **ಕೆಡವಿ ಹಾಕುವ/ತೆಗೆದುಹಾಕುವ ಕ್ರಮಗಳನ್ನು ಕೈಗೊಳ್ಳಲು** 1 ರಿಂದ 7 ರ ವರೆಗಿನ ಪ್ರತ್ಯರ್ಜಿದಾರರಿಗೆ ನಿರ್ದೇಶಿಸುವುದು;*

*(ಜಿ) ಮ್ಯಾಂಡಮಸ್ ರಿಟ್ ಅಥವಾ ಸಂದರ್ಭಾನುಸಾರ ಯಾವುದೇ ಇತರ ಸೂಕ್ತ ರಿಟ್ ಅಥವಾ ನಿರ್ದೇಶನ ನೀಡುವ ಮೂಲಕ, ಬೆಂಗಳೂರು ಪೂರ್ವ ತಾಲ್ಲೂಕಿನ ವರ್ತೂರು ಹೋಬಳಿಯ **ಕಸವನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ 8/2ನ್ನು ಹೊಂದಿರುವ** ಜಮೀನಿನಲ್ಲಿ ಯಾವುದೇ ಮುಂದಿನ ನಿರ್ಮಾಣವನ್ನು ಮಾಡುವುದರಿಂದ 8 ರಿಂದ 12 ರ ವರೆಗಿನ ಪ್ರತ್ಯರ್ಜಿದಾರರನ್ನು ನಿಗ್ರಹಿಸಲು 1 ರಿಂದ 7 ರ ವರೆಗಿನ ಪ್ರತ್ಯರ್ಜಿದಾರರಿಗೆ ನಿರ್ದೇಶಿಸುವುದು.*

*(ಎಚ್) ಈ ಸನ್ಮಾನ್ಯ ನ್ಯಾಯಾಲಯದ ಪ್ರಕರಣದ ಸಂದರ್ಭಗಳಲ್ಲಿ ಅನುದಾನ ನೀಡಲು ಯೋಗ್ಯವೆಂದು ಭಾವಿಸುವಂಥ ಇತರ ಪರಿಹಾರಗಳನ್ನು ನೀಡುವುದು".*

ಹೀಗಾಗಿ, ಅವರು ಪ್ರತ್ಯರ್ಜಿದಾರರು–ನಿರ್ಮಾಣಕಾರರ ಪರವಾಗಿ ಮಂಜೂರಾದ ಎಲ್ಲಾ ಯೋಜನೆಗಳನ್ನು ರದ್ದುಪಡಿಸಬೇಕೆಂದು ಮತ್ತು ವಜಾ ಮಾಡಬೇಕೆಂದು ಅಪೇಕ್ಷಿಸುವುದಷ್ಟೇ ಅಲ್ಲದೆ, ಸಾರ್ವಜನಿಕ ಬಳಕೆಗಾಗಿ, ಬಿಬಿಎಂಪಿ ಪರವಾಗಿ ನಿರ್ಮಾಣಕಾರರು ಬರೆದುಕೊಟ್ಟ ತ್ಯಾಗಪತ್ರವನ್ನು ಸಹ, ಅದರಲ್ಲೂ, ಭಾರತ ಸಂವಿಧಾನದ 226ನೇ ಅನುಚ್ಛೇದದಡಿ ರಿಟ್ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸುವ ಮೂಲಕ, ರದ್ದುಪಡಿಸಲು ಕೋರಿದ್ದಾರೆ.

2. ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ಸ್ ಅಧಿನಿಯಮ 1976ರ (ಇನ್ನೂ ಮುಂದೆ ಸಂಕ್ಷಿಪ್ತವಾಗಿ 'ಅಧಿನಿಯಮ' ಎನ್ನಲಾಗಿದೆ) 321ನೇ ಪ್ರಕರಣದಡಿ ಅಂಥ ದೂರುದಾರರ ಉದಾಹರಣೆಯಲ್ಲಿ, ಈ ಖಾಸಗಿ ಪ್ರತ್ಯರ್ಜಿದಾರರು – ನಿರ್ಮಾಣಕಾರರ ವಿರುದ್ಧ ಕೈಗೊಳ್ಳಲಾದ ಕ್ರಮದ ವಿರುದ್ಧ, 9ನೇ ಪ್ರತ್ಯರ್ಜಿದಾರರಾದ ಶ್ರೀ ಕೆ.ಎಸ್. ಜಗದೀಶ್ ರೆಡ್ಡಿಯವರು ಅಪೀಲು ಹೂಡಿದ್ದಾರೆ ಮತ್ತು ಅಪೀಲು ಸಂಖ್ಯೆ 893/2013 ಹಾಗೂ 894/2013ರಲ್ಲಿ ಅಂತಹ ಎರಡು ಅಪೀಲುಗಳು ಕರ್ನಾಟಕ ಅಪೀಲು ನ್ಯಾಯಾಧಿಕರಣದ (ಇನ್ನು ಮುಂದೆ ಸಂಕ್ಷಿಪ್ತವಾಗಿ 'ನ್ಯಾಯಾಧಿಕರಣ' ಎನ್ನಲಾಗಿದೆ) ಮುಂದೆ ಇತ್ಯರ್ಥದಲ್ಲಿದ್ದು, ಅವುಗಳನ್ನು ಅಧಿನಿಯಮದ 443–ಎ ಪ್ರಕರಣದಡಿ ಸಲ್ಲಿಸಲಾಗಿರುತ್ತದೆ ಎಂದು ಪ್ರತ್ಯರ್ಜಿದಾರರ ಪರ ಮಾನ್ಯ ವಕೀಲರು ನ್ಯಾಯಾಧಿಕರಣದ ಗಮನಕ್ಕೆ ತಂದಿದ್ದಾರೆ.

3. ದೂರುದಾರರು ಮೇಲೆ ಹೇಳಿದ ಇತ್ಯರ್ಥದಲ್ಲಿರುವ ಅಪೀಲುಗಳಲ್ಲಿ ಈಗಿನ ಅರ್ಜಿದಾರರು ಸದರಿ ನ್ಯಾಯಾಧಿಕರಣದ ಮುಂದೆ ಪಕ್ಷಕಾರರಾಗಿಲ್ಲ.

4. ಈ ರಿಟ್ ಅರ್ಜಿಗಳ ಸಮರ್ಥನೀಯತೆಯ ಪ್ರಶ್ನೆಯ ಆಧಾರದ ಮೇಲೆ ಅರ್ಜಿದಾರರ ಪರ ಮಾನ್ಯ ವಕೀಲರು ದಿನಾಂಕ 18.8.2015ರ ಈ ನ್ಯಾಯಾಲಯದ ಸಮನ್ವಯ ಪೀಠವು ಹೊರಡಿಸಿದ ಮಧ್ಯಂತರ ಆದೇಶವನ್ನು ನ್ಯಾಯಾಲಯದ ಗಮನಕ್ಕೆ ತಂದಿದ್ದಾರೆ ಮತ್ತು ಅದನ್ನು ಸಿದ್ಧ ಪರಾಮರ್ಶೆಗಾಗಿ ಈ ಕೆಳಗೆ ಉದ್ಧರಿಸಲಾಗಿದೆ:

*"ರಿಟ್ ಅರ್ಜಿಗಳ ವಜಾ ಮಾಡಲು ಜ್ಞಾಪನವನ್ನು ಸಲ್ಲಿಸಲಾಗಿದೆ.*

*8 ರಿಂದ 12ರ ವರೆಗಿನ ಪ್ರತ್ಯರ್ಜಿದಾರರು ಮಾಡಿರುವ ಆಪಾದನೆಯಂತೆ, ಅರ್ಜಿದಾರರು ಅಕ್ರಮ ನಿರ್ಮಾಣವನ್ನು ಪ್ರಶ್ನಿಸಿದ್ದಾರೆ. ಹಾಗಿದ್ದರೂ, ತರುವಾಯ ಬಿಬಿಎಂಪಿಯು ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ಸ್ ಅಧಿನಿಯಮ, 1976ರ 321ನೇ ಪ್ರಕರಣದಡಿ ತಾತ್ಕಾಲಿಕ ನೋಟೀಸನ್ನು ನೀಡಿದೆ ಮತ್ತು ಸದರಿ ಅಧಿನಿಯಮದ 321(3)ನೇ ಪ್ರಕರಣದಡಿ ಅಂತಿಮ ನೋಟೀಸನ್ನು ನೀಡಿದೆ. ಪ್ರತ್ಯರ್ಜಿದಾರರು ಈ ನೋಟೀಸುಗಳ ಕಾನೂನುಸಮ್ಮತತೆಯನ್ನು ಕರ್ನಾಟಕ ಅಪೀಲು ನ್ಯಾಯಾಧಿಕರಣದ ಮುಂದೆ ಈಗಾಗಲೇ ಪ್ರಶ್ನಿಸಿದ್ದಾರೆ. ಈ ವಿಷಯವು ನ್ಯಾಯಾಧಿಕರಣದ ಮುಂದೆ ನ್ಯಾಯ ವಿಚಾರಣಾಧೀನವಾಗಿರುವ ಕಾರಣದಿಂದಾಗಿ, ಈಗಿನ ಅರ್ಜಿದಾರರಲ್ಲಿ ಯಾವುದೇ ಮುಂದಿನ ವ್ಯಾಜ್ಯಕಾರಣ ಉಳಿಯುವುದಿಲ್ಲ. ಆದುದರಿಂದ, ಈ ಅರ್ಜಿಗಳು ನಿರರ್ಥಕವಾಗಿದ್ದು, ಇವುಗಳನ್ನು ವಜಾ ಮಾಡತಕ್ಕದ್ದು ಎಂದು ಪ್ರತ್ಯರ್ಜಿದಾರರ ಪರ ಮಾನ್ಯ ವಕೀಲರು ನಿವೇದಿಸಿದ್ದಾರೆ.*

*ಮತ್ತೊಂದು ಕಡೆಯಲ್ಲಿ, ಅರ್ಜಿದಾರರ ಪರ ಮಾನ್ಯ ವಕೀಲರಾದ ಶ್ರೀ ಡಿ.ಆರ್. ರವಿಶಂಕರ್‌ರವರು, ಅಕ್ರಮ ನಿರ್ಮಾಣದ ವಿವಾದವನ್ನು ಎತ್ತಿರುವ ಜೊತೆಗೆ, ತ್ಯಾಗಪತ್ರದ ವಿವಾದವನ್ನು ಸಹ ಎತ್ತಿದ್ದು, ಅವುಗಳನ್ನು ಬಿಬಿಎಂಪಿ ಪರವಾಗಿ ಮಾಡಲಾಗಿದೆ. ಆದುದರಿಂದ, ಬಿಬಿಎಂಪಿ ಹೊರಡಿಸಿದ ಈ ಮೇಲೆ ಗಮನಿಸಲಾದ ನೋಟೀಸನ್ನು ಪ್ರಶ್ನಿಸುವ ಮೂಲಕ ಮಾತ್ರವೇ ಅರ್ಜಿದಾರರು ಮಾಡಿದ ಕೋರಿಕೆಯು ಸತ್ವವನ್ನು ಕಳೆದುಕೊಂಡಿಲ್ಲ ಅಥವಾ ಕಾಣದಂತೆ ಅಳಿಸಿಹೋಗಿಲ್ಲ. ಆದ್ದರಿಂದ ವ್ಯಾಜ್ಯಕಾರಣವು ಹಾಗೆಯೇ ಉಳಿದಿರುತ್ತದೆ. ಹೀಗಾಗಿ, ಅರ್ಜಿಗಳು ನಿರರ್ಥಕವಾಗಿಲ್ಲ ಎಂದು ವಾದಿಸಿದ್ದಾರೆ.*

*12ನೇ ಪ್ರತ್ಯರ್ಜಿದಾರರ ಪರ ಮಾನ್ಯ ಹಿರಿಯ ವಕೀಲರಾದ, ಶ್ರೀ ಲಕ್ಷ್ಮೀನಾರಾಯಣನ್ ರವರು ರಿಟ್ ಅರ್ಜಿಗಳ ಸಮರ್ಥನೀಯತೆಗೆ ಸಂಬಂಧಿಸಿದ ಪ್ರಾರಂಭಿಕ ವಿವಾದವನ್ನು ಎತ್ತಿದ್ದಾರೆ.*

*ಪಕ್ಷಕಾರರ ಪರ ಮಾನ್ಯ ವಕೀಲರ ವಾದಗಳನ್ನು ಆಲಿಸಲಾಗಿದೆ. ಅರ್ಜಿದಾರರು ಬಹಳ ಹೆಚ್ಚಿನ ಸಂಖ್ಯೆಯ ವಿವಾದಗಳನ್ನು ಎತ್ತಿರುವುದರಿಂದಾಗಿ,* ***ರಿಟ್ ಅರ್ಜಿಗಳ ಸಮರ್ಥನೀಯತೆಗೆ ಸಂಬಂಧಿಸಿದ ವಿವಾದವು ಇನ್ನೂ ಚರ್ಚಿಸಬೇಕಿರುವುದರಿಂದ ಹಾಗೂ ನ್ಯಾಯ ನಿರ್ಣಯವನ್ನು ಮಾಡಬೇಕಿರುವುದರಿಂದ,*** *ಮಾನ್ಯ ನ್ಯಾಯಾಧಿಕರಣದ ಮುಂದೆ ಬಿಬಿಎಂಪಿ ನೀಡಿದ ನೋಟೀಸನ್ನು ಪ್ರಶ್ನಿಸುವ ಮೂಲಕ ಮಾತ್ರವೇ ಈಗಿನ ಅರ್ಜಿಗಳನ್ನು ನಿರರ್ಥಕಗೊಳಿಸಲಾಗದು. ಅದಕ್ಕಾಗಿ,* **ಇನ್ನೂ ಹೆಚ್ಚಿನ ಸಂಖ್ಯೆಯ ವಿವಾದಗಳನ್ನು ಈ ನ್ಯಾಯಾಲಯವು ನ್ಯಾಯನಿರ್ಣಯ ಮಾಡಬೇಕಾದ ಅಗತ್ಯತೆಯಿದೆ**. *ಆದುದರಿಂದ, ಈ ನ್ಯಾಯಾಲಯಕ್ಕೆ ವಜಾಗಾಗಿ ಸಲ್ಲಿಸಿದ ಜ್ಞಾಪನದಲ್ಲಿ ಯಾವುದೇ ಗುಣಾರ್ಹತೆ ಕಂಡುಬಂದಿಲ್ಲ. ತದನುಸಾರವಾಗಿ, ಜ್ಞಾಪನವನ್ನು ವಜಾ ಮಾಡಲಾಗಿದೆ.*

*ಈ ಪ್ರಕರಣಗಳನ್ನು ದಿನಾಂಕ 15.9.2015ರಂದು ಪಟ್ಟಿ ಮಾಡಿ.”*

5. ಈ ನ್ಯಾಯಾಲಯವು, ವಿಷಯದ ಪ್ರಾರಂಭಿಕ ಸುನಾವಣೆಯ ಆಧಾರದ ಮೇಲೆ ಈಗಿನ ರಿಟ್ ಅರ್ಜಿಗಳು ಸಮರ್ಥನೀಯವಾಗಿಲ್ಲ ಮತ್ತು ಈ ಹಂತದಲ್ಲೇ ವಜಾಗೊಳ್ಳಲು ತಕ್ಕುದಾಗಿವೆ ಮತ್ತು ಇದರಲ್ಲಿ ಎತ್ತಲಾದ, ಮೇಲೆ ಹೇಳಿದ ಹೆಚ್ಚಿನ ಸಂಖ್ಯೆಯ ವಿವಾದಗಳನ್ನು ನಿರ್ಣಯಿಸಲು ಯಾವುದೇ ಕಾರಣವಿಲ್ಲ ಎಂಬ ಪರಿಗಣಿತ ಅಭಿಪ್ರಾಯವನ್ನು ಹೊಂದಿದೆ.

6. ಪ್ರಸ್ತುತ ಪ್ರಕರಣವು ಸ್ಪಷ್ಟವಾಗಿ ಸಂಗತಿಗಳ ವ್ಯಾಪ್ತಿಯಲ್ಲಷ್ಟೇ ಅಲ್ಲದೆ ಸಂಗತಿಗಳ ಸಂಕೀರ್ಣ ತರ್ಕಜಾಲವನ್ನು ವಿಚಾರಣೆ ನಡೆಸಬೇಕಾದ ಪ್ರಕರಣವಾಗಿದ್ದು, ಇಲ್ಲಿ ಪ್ರತ್ಯರ್ಜಿದಾರ/ನಿರ್ಮಾಣಕಾರರು ವಿವಿಧ ಅಧಿನಿಯಮಿತಿಗಳ ಅನೇಕ ಶಾಸನಾತ್ಮಕ ಉಪಬಂಧಗಳ ಉಲ್ಲಂಘನೆಯಲ್ಲಿ ನಿರ್ಮಾಣಗಳನ್ನು ಮಾಡಿರುವುದಾಗಿ ಆಪಾದಿಸಲಾಗಿದೆ ಮತ್ತು ಬಿಬಿಎಂಪಿ ಪರವಾಗಿ ತ್ಯಾಗಪತ್ರದಂತಹ ಕೆಲವು ನೋಂದಾಯಿತ ದಾಖಲೆಗಳನ್ನು ಸಹ ರದ್ದುಪಡಿಸಲು ಕೋರಲಾಗಿದ್ದು, ಅದು

ಸೂಕ್ತವಾಗಿ ಹೂಡಲಾದ ಸಿವಿಲ್ ದಾವೆಯಲ್ಲಿ ಸಕ್ಷಮ ಸಿವಿಲ್ ನ್ಯಾಯಾಲಯದಿಂದ ಮಾತ್ರ ಪ್ರಯತ್ನಿಸಬಹುದಾದ ಸಾದಾ ಹಾಗೂ ಸರಳ ವ್ಯಾಜ್ಯೆಯಾಗಿದೆಯೇ ಹೊರತು ರಿಟ್ ಅಧಿಕಾರ ವ್ಯಾಪ್ತಿಗೆ ಬರುವಂತದ್ದಲ್ಲ.

7. ಮೊದಲನೆಯದಾಗಿ, ಈ ನ್ಯಾಯಾಲಯದ ಮುಂದಿರುವ ಅರ್ಜಿದಾರ–ದೂರುದಾರರು ತಾವಾಗಿಯೇ ಅಂಥ ಉಲ್ಲಂಘನೆಗಳನ್ನು ಸಂಬಂಧಪಟ್ಟ ಸಾರ್ವಜನಿಕ ಸಂಸ್ಥೆಗಳ ಗಮನಕ್ಕೆ ತರಲೇಬೇಕಿತ್ತು ಮತ್ತು ಅವರು ಹಾಗೆ ಮಾಡಿದ್ದಲ್ಲಿ, ಸಾರ್ವಜನಿಕ ಸಂಸ್ಥೆಗಳು ಕಾನೂನಿನ ಅನುಸಾರ ಕ್ರಮ ಕೈಗೊಳ್ಳುತ್ತಿದ್ದವೆಂದು ಹಾಗೂ ಅಂಥ ಮನವಿಗಳು/ದೂರುಗಳ ಮೇಲೆ ಸೂಕ್ತ ಕಾರಣಗಳ ಆದೇಶವನ್ನು ಹೊರಡಿಸುತ್ತಿದ್ದರೆಂದು ಮಾತ್ರ ನಿರೀಕ್ಷಿಸಲಾಗುತ್ತಿತ್ತು. ಅಂಥ ಕ್ರಮ ಅಥವಾ ಆದೇಶಗಳು ಯಾರೇ ವ್ಯಕ್ತಿಗೆ ಯಾವುದೇ ತೊಂದರೆಗೆ ಕಾರಣವಾದರೆ, ಸಂಬಂಧಪಟ್ಟ ಕಾನೂನುಗಳಲ್ಲೇ ಉಪಬಂಧಿಸಿದ ಪರಿಹಾರಗಳಿದ್ದು, ಅಲ್ಲಿ ಅಂಥ ತೊಂದರೆಗಳ ಬಗ್ಗೆ ದೂರು ಸಲ್ಲಿಸಬಹುದು. ಪ್ರತ್ಯರ್ಜಿದಾರ – ಬಿಬಿಎಂಪಿ ಕೈಗೊಂಡ ಕ್ರಮದ ವಿರುದ್ಧ ಅಂತಹ ಎರಡು ಅಪೀಲುಗಳು, ಅಂತಹ ಸಂಗತಿಗಳನ್ನು ಪರಿಶೀಲಿಸುವ ಸಕ್ಷಮ ನ್ಯಾಯಾಧಿಕರಣದ ಮುಂದೆ ಇತ್ಯರ್ಥದಲ್ಲಿವೆಯೆಂಬ ಸಂಗತಿಯೇ, ಈಗಿನ ಅರ್ಜಿದಾರರು ತಮ್ಮ ದೂರು ಮತ್ತು ಸಾಕ್ಷ್ಯವನ್ನು ಸದರಿ ನ್ಯಾಯಾಧಿಕರಣದ ಮುಂದೆ ಮಂಡಿಸುವ ವಿಷಯದಲ್ಲಿ ತಮ್ಮನ್ನು ಪಕ್ಷಕಾರರನ್ನಾಗಿ ಮಾಡುವಂತೆ ಕೋರುವ ಬದಲಿಗೆ, ಈಗಿನ ಮೂರು ರಿಟ್ ಅರ್ಜಿಗಳ ಮೂಲಕ ಈ ನ್ಯಾಯಾಲಯದ ಮೊರೆ ಹೋಗಿದ್ದು, ವ್ಯಾಜ್ಯೆಯನ್ನು ಒಂದಕ್ಕಿಂತ ಹೆಚ್ಚು ನ್ಯಾಯ ವೇದಿಕೆಗಳಲ್ಲಿ ಚೆಲ್ಲಾಪಿಲ್ಲಿಯಾಗುವಂತೆ ಮಾಡಿದ್ದು, ಅದು ಅನುಮತೀಯವಾಗಿಲ್ಲ ಅಥವಾ ಅಪೇಕ್ಷಣೀಯವೂ ಅಲ್ಲ. ಎರಡು ನ್ಯಾಯಾಧಿಕರಣಗಳಿಂದ ಹೊರಡಿಸಬೇಕಾದ ಆದೇಶಗಳು ಪರಸ್ಪರ ವಿರುದ್ಧವಾಗಿರುವ ಸಂಭವವಿರುವುದಷ್ಟೇ ಅಲ್ಲದೆ, ಮೇಲೆ ಸೂಚಿಸಲಾದಂತೆ ಸದ್ಯದ ಪ್ರಕರಣವು ಸ್ಪಷ್ಟವಾಗಿ, ಪ್ರಕರಣದಲ್ಲಿನ ಅಷ್ಟೊಂದು ಸಂಗತಿಗಳಲ್ಲಿ ಆಳವಾದ ಪರಿಶೀಲನೆಯನ್ನು ಅಗತ್ಯಪಡಿಸಿದ್ದು, ಅವುಗಳನ್ನು ಸಿವಿಲ್ ಪ್ರಕ್ರಿಯಾ ಸಂಹಿತೆಯ ಸಂಬಂಧಪಟ್ಟ ಉಪಬಂಧಗಳೊಂದಿಗೆ ಓದಲಾದ ಸಾಕ್ಷ್ಯ ಅಧಿನಿಯಮದ ಉಪಬಂಧಗಳನುಸಾರ ಸಾಬೀತುಪಡಿಸುವ ಅಗತ್ಯತೆಯಿದೆ ಮತ್ತು

ಅದನ್ನು ಭಾರತ ಸಂವಿಧಾನದ 226ನೇ ಅನುಚ್ಛೇದದಡಿ ಈ ನ್ಯಾಯಾಲಯದ ಅಸಾಧಾರಣ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸಿ ಕೈಗೊಳ್ಳಲಾಗದು ಹಾಗೂ ಇದು ಹಾಗೆ ಕೈಗೊಳ್ಳಲು ತಕ್ಕದ್ದಾಗಿಲ್ಲ.

8. ಆದುದರಿಂದ, ಅರ್ಜಿದಾರರು–ದೂರುದಾರರು, ಅಂಥ ಬಹಳ ಗೋಜಲಿನ ಮತ್ತು ಸಂಚರಿಸುವ ವಿಚಾರಣೆಯನ್ನು ನಡೆಸಲು ಮತ್ತು ಈ ಎಲ್ಲಾ ಸಂಗತಿಗಳಲ್ಲಿ ಪರಿಶೀಲನೆಯನ್ನು ಕೈಗೊಳ್ಳಲು ಮತ್ತು ಬಿಬಿಎಂಪಿ ಹಾಗೂ ಬಿ.ಡಿ.ಎ. ನಂತಹ ಸಾರ್ವಜನಿಕ ಸಂಸ್ಥೆಗಳ ಕಾರ್ಯವನ್ನು ಮೇಲ್ವಿಚಾರಣೆ ಮಾಡಲು ಹಾಗೂ ಬೇರೆ ರೀತಿಯಲ್ಲೂ ಸಹ ಅವರು ನಿರೀಕ್ಷಿಸಿದ ಹಾಗೂ ಅವರು ಕಾನೂನಿನಲ್ಲಿ ಕೈಗೊಳ್ಳಬಹುದಾದ ಕ್ರಮವನ್ನು ಕೈಗೊಳ್ಳುವಂತೆ ಅವುಗಳನ್ನು ಒತ್ತಾಯಿಸಲು ಈ ರಿಟ್ ಅಧಿಕಾರ ವ್ಯಾಪ್ತಿಯಲ್ಲಿ ಈ ನ್ಯಾಯಾಲಯವನ್ನು ಕೋರಲಾಗದು ಮತ್ತು ಸಂಬಂಧಪಟ್ಟ ಅಧಿಕಾರಿಗಳನ್ನು ಸಂಪರ್ಕಿಸಿ, ತಮ್ಮ ವಿಷಯಗಳನ್ನು ಅವರ ಮುಂದಿಟ್ಟು ಅವುಗಳ ತಾರ್ಕಿಕ ಮುಕ್ತಾಯಕ್ಕಾಗಿ ಅನುಸರಣೆ ಮಾಡುವ ಬದಲಿಗೆ, ಅಧೀನ ನ್ಯಾಯಾಲಯಗಳಿಗೆ ತಳ್ಳಿಬಿಡಲು ತಕ್ಕುದಾಗಿರುವ ಇಂಥ ವಿಷಯಗಳಲ್ಲಿ ಅರ್ಜಿದಾರರು ನೇರವಾಗಿ ಮತ್ತು ನಿಗದಿತ ಸಮಯಕ್ಕೆ ಮುಂಚೆ, ಇಂಥ ಪ್ರಕರಣಗಳಲ್ಲಿ ಈ ನ್ಯಾಯಾಲಯದ ರಿಟ್ ಅಧಿಕಾರ ವ್ಯಾಪ್ತಿಯನ್ನು ಕೋರುತ್ತಿದ್ದಾರೆ.

9. ಈ ನ್ಯಾಯಾಲಯವು ಈ ರೀತಿಯ ವ್ಯಾಜ್ಯೆಯ ಪ್ರವಾಹವನ್ನು ಅನುಭವಿಸುತ್ತಿದೆ ಮತ್ತು ಪ್ರಾಮಾಣಿಕ ಕಾರಣಗಳಿಗಾಗಿ ಅಥವಾ ಗುಪ್ತ ಉದ್ದೇಶಗಳಿಗಾಗಿ ಸಹ ಕೈಗೊಂಡಿರಬಹುದಾದ ಅಂಥ ಖಾಸಗಿ ವಿವಾದಗಳನ್ನು ರಿಟ್ ಅಧಿಕಾರ ವ್ಯಾಪ್ತಿಯಲ್ಲಿ ಪುರಸ್ಕರಿಸಲು ಅನುಮತಿಸಲಾಗಿದೆಯೆಂಬ ಸಂಗತಿಯೇ, ನ್ಯಾಯಾಲಯದ ಅಮೂಲ್ಯವಾದ ಸಾರ್ವಜನಿಕ ಸಮಯವನ್ನು ಬಹಳಷ್ಟು ವ್ಯಯ ಮಾಡುವುದಾಗಿದ್ದು, ಅದು ಸಂಪೂರ್ಣವಾಗಿ ಅನಗತ್ಯವಾದುದಾಗಿದೆ. ಅಂಥ ವಿಚಾರಣೆಯನ್ನು ಕೈಗೊಳ್ಳಲು ಅಫಿಡವಿಟ್‌ಗಳಿಂದ ಮಾತ್ರ ಸಮರ್ಥಿತವಾದ, ರಿಟ್ ಅರ್ಜಿಗಳಲ್ಲಿ ಮಾಡಲಾದ ದೃಢೋಕ್ತಿಗಳನ್ನು ಸಾಬೀತಾದ ಸಂಗತಿಗಳೆಂದು

ಅಥವಾ ವೇದವಾಕ್ಯಗಳೆಂದು ಪರಿಗಣಿಸಲಾಗದು. ಭಾರತ ಸಂವಿಧಾನದ 226ನೇ ಅನುಚ್ಛೇದದಡಿ, ಎಲ್ಲವನ್ನೂ ಗುಡಿಸಿಹಾಕುವ ರೀತಿಯ ಅರ್ಜಿಯ ಮೂಲಕ, ವಿವಿಧ ಸ್ಥಳಗಳಲ್ಲಿ ನಡೆಯುತ್ತಿರಬಹುದಾದ ಯೋಜನೆಗಳು, ಮಂಜೂರಾತಿಗಳು ಮತ್ತು ನಿರ್ಮಾಣಗಳ ಅಷ್ಟೊಂದು ನಿರ್ಮಾಣಕಾರರ ವಿರುದ್ಧ ಪರಸ್ಪರ ಮಿಶ್ರವಾದ ಹಾಗೂ ಒಟ್ಟಾಗಿ ಜೋಡಿಸಿದ ಅಂಥ ವ್ಯಾಜ್ಯಗಳಿಂದ ಖಂಡಿಸಲಾಗದು.

ಮಂಜೂರಾದ ಯೋಜನೆಗಳನ್ನು ಪಡೆಯಲಾಗಿದೆಯೋ ಅಥವಾ ಇಲ್ಲವೋ? ಯುಕ್ತ ಅನುಮೋದನೆಗಳನ್ನು ನಿಯಮಾನುಸಾರ ನೀಡಲಾಗಿದೆಯೋ ಅಥವಾ ಇಲ್ಲವೋ? ನಿರ್ಮಾಣಗಳನ್ನು ಮಂಜೂರಾದ ಯೋಜನೆಗಳಿಂದ ಮಾರ್ಗಾಂತರ ಮಾಡಲಾಗಿದೆಯೋ ಅಥವಾ ಇಲ್ಲವೋ? ಅರ್ಜಿದಾರರ ಅಹವಾಲು ಹೇಳಿಕೊಳ್ಳುವ ಹಕ್ಕು ಮತ್ತು ಪ್ರಾಮಾಣಿಕತೆ ಏನು? ಮತ್ತು ಅವರಿಗೆ ಉಂಟಾದ ಪೂರ್ವಾಗ್ರಹ ಯಾವುದು? (ರಹಸ್ಯ ವೈರತ್ವವುಳ್ಳ ನಿರ್ಮಾಣಕಾರರ ಉದಾಹರಣೆಯಲ್ಲಿ ಹೊರತುಪಡಿಸಿ, ನಿರ್ಮಾಣಕಾರರ ಸಮೂಹದ ವಿರುದ್ಧ ಮೂವರು ವ್ಯಕ್ತಿಗಳು ಇಂಥ ದಾವೆಯಲ್ಲಿ ಸಾರ್ವಜನಿಕ ಸಂಸ್ಥೆಗಳನ್ನು ಗೊಂದಲಕ್ಕೆ ಸಿಕ್ಕಿಸಿ, ಏಕೆ ವಿವಾದ ಎತ್ತಿದ್ದಾರೆ ಎಂಬುದು ಪರ್ಯಾಲೋಚಿಸಬೇಕಾದ ಗಂಭೀರ ಪ್ರಶ್ನೆಯಾಗಿದೆ). ಸಾರ್ವಜನಿಕ ಸಂಸ್ಥೆಗಳು ತಮಗೆ ಉಂಟಾದ ಕುಂದುಕೊರತೆಗಳ ಬಗ್ಗೆ ವ್ಯವಹರಿಸಿರುವರೆ ಅಥವಾ ಇಲ್ಲವೆ? ಸಂಬಂಧಪಟ್ಟ ಶಾಸನಗಳಡಿ ಉಪಬಂಧಿಸಿದ ಅಪೀಲು ಕಾರ್ಯವಿಧಾನವನ್ನು ಪೂರ್ಣವಾಗಿ ಬಳಸಲಾಗಿದೆಯೆ ಅಥವಾ ಇಲ್ಲವೆ? ಎಂಬುದು ಇಂಥ ಪ್ರಕರಣಗಳಲ್ಲಿ ಸೂಕ್ತ ಪ್ರಶ್ನೆಗಳಾಗಿವೆ.

10. ಎಲ್ಲಾ ಆಪಾದಿತ ಕೆಡುಕುಗಳಿಗೆ ರಿಟ್ ಅಧಿಕಾರ ವ್ಯಾಪ್ತಿಯನ್ನು ರಾಮಬಾಣದಂತೆ ಪರಿಗಣಿಸಿರುವುದು ದುರದೃಷ್ಟಕರವಾಗಿದೆ ಮತ್ತು ಎಲ್ಲಕ್ಕೂ ಅನ್ವಯಿಸುವ ಮತ್ತು ನೀರಸವಾದ ದೃಢೋಕ್ತಿಗಳು ಮತ್ತು ಆಕ್ಷೇಪಣೆಗಳು ಹಾಗೂ ಈ ರೀತಿಯ ಪ್ರಕರಣಗಳಲ್ಲಿ ಈ ನ್ಯಾಯಾಲಯದ ವಿಷಯಸೂಚಿಯಲ್ಲಿ ಮುಂದಿಡಲಾದ ರಾಶಿ ರಾಶಿ ದಾಖಲೆಗಳನ್ನು ರಿಟ್ ನ್ಯಾಯಾಲಯವು ಪರಿಶೀಲಿಸಲು ಕೋರಲಾಗಿದ್ದು, ಇದರಿಂದ ಇಂಥ ವಿವಾದಗಳು ಮತ್ತು ವಿಷಯಗಳು ಅಧೀನ

ನ್ಯಾಯವೇದಿಕೆಗಳಲ್ಲಿ ಎಂದರೆ, ಈ ಕಾನೂನುಗಳಡಿ ರಚಿಸಲಾದ ಇಲಾಖಾ ಪ್ರಾಧಿಕಾರಗಳು ಮತ್ತು ನ್ಯಾಯಾಧಿಕರಣಗಳಲ್ಲಿ ಮಂಡಿಸಬೇಕಿದ್ದು, ಅವರಿಂದ ಸೂಕ್ತ ಸಾಕ್ಷ್ಯಾಧಾರದ ಮೇಲೆ ಸಂಗತಿಗಳ ನಿರ್ಣಯ ನೀಡಲು ನಿರೀಕ್ಷಿಸಲಾಗಿದೆ ಹಾಗೂ ಇದು ವಾಸ್ತವವಾಗಿ ವ್ಯವಹಾರಗಳ ದುಸ್ಥಿತಿಯಾಗಿದೆ.

11. ಅರ್ಜಿದಾರರ ಪರ ಮಾನ್ಯ ವಕೀಲರ ಸಮರ್ಥನೆಯು, ಸಂಕ್ಷಿಪ್ತವಾಗಿ ಹೇಳುವುದಾದರೆ, ಸಮನ್ವಯ ಪೀಠವು ಹೊರಡಿಸಿದ, ಮೇಲೆ ಹೇಳಿದ, ಮಧ್ಯಂತರ ಆದೇಶವು ತಪ್ಪು ಕಲ್ಪನೆಯಿಂದ ಕೂಡಿದೆಯೆಂಬ ದೃಷ್ಟಿಯಿಂದ, ಈ ನ್ಯಾಯಾಲಯವು ಈ ಹಂತದಲ್ಲಿ ಈ ರಿಟ್ ಅರ್ಜಿಗಳನ್ನು ವಜಾ ಮಾಡತಕ್ಕದ್ದಲ್ಲ ಎಂಬುದಾಗಿದೆ.

12. ಅರ್ಜಿದಾರರ ಪರ ಮಾನ್ಯ ವಕೀಲರಿಗೆ ಎಲ್ಲಾ ಯುಕ್ತ ಗೌರವದೊಂದಿಗೆ, ಹೇಳುವುದೇನೆಂದರೆ, ಈ ನ್ಯಾಯಾಲಯದ ಸಮನ್ವಯ ಪೀಠವು ಹೊರಡಿಸಿದ ಸದರಿ ಮಧ್ಯಂತರ ಆದೇಶದಲ್ಲಿ, ಅದೇ ಆದೇಶವು ತಾನಾಗಿಯೇ "ಅರ್ಜಿದಾರರು ಬಹಳ ಹೆಚ್ಚಿನ ಸಂಖ್ಯೆಯ ವಿವಾದಗಳನ್ನು ಮಂಡಿಸಿದ್ದಾರೆ ಮತ್ತು ರಿಟ್ ಅರ್ಜಿಗಳ ಸಮರ್ಥನೀಯತೆಗೆ ಸಂಬಂಧಿಸಿದ ವಿವಾದವು ಇನ್ನೂ ಚರ್ಚಿತವಾಗಬೇಕಾದ ಅಗತ್ಯವಿದೆ" ಎಂದು ತಿಳಿಸುತ್ತದೆ. ಆದುದರಿಂದ, ಈ ಹಂತದಲ್ಲಿ ರಿಟ್ ಅರ್ಜಿಗಳನ್ನು ವಜಾ ಮಾಡಿರದಿದ್ದರೂ ಮತ್ತು ವಾದವಿವಾದಕ್ಕೆ ಅವಕಾಶವಿದ್ದರೂ ಸಹ ಅರ್ಜಿದಾರರು, ಈ ರಿಟ್ ಅರ್ಜಿಗಳನ್ನು ಮುಂದುವರೆಸಲು ಹಾಗೂ ಗುಣಾವಗುಣಗಳ ಆಧಾರದ ಮೇಲೆ ವಿವರಗಳನ್ನು ವಿಸ್ತರಿಸಲು ಈ ನ್ಯಾಯಾಲಯವನ್ನು ಒತ್ತಾಯಿಸಲಾಗದು.

13. ಈ ನ್ಯಾಯಾಲಯದ ಸ್ಪಷ್ಟ ಅಭಿಪ್ರಾಯವೇನೆಂದರೆ, ಸದ್ಯದ ಪ್ರಕರಣದ ಗುಣಾವಗುಣಗಳು ಬಿಬಿಎಂಪಿ ಅಥವಾ ಬಿಡಿಎದಂಥ ಸಾರ್ವಜನಿಕ ಸಂಸ್ಥೆಗಳ ಅಧೀನ ನ್ಯಾಯವೇದಿಕೆಗಳು ಅಥವಾ ಪ್ರಾಧಿಕಾರಗಳು ಅಥವಾ ಸಂಬಂಧಪಟ್ಟ ಪಟ್ಟಣ ಯೋಜನೆ ಪ್ರಾಧಿಕಾರದಿಂದ ನಿರ್ಧರಿತವಾಗಲು ತಕ್ಕುದಾಗಿವೆ ಮತ್ತು ಅವು ಹಾಗೆ ನಿರ್ಧಾರವಾದಲ್ಲಿ ಅಥವಾ ಭವಿಷ್ಯದಲ್ಲಿ ಹಾಗೆ ನಿರ್ಧಾರವಾಗುವಲ್ಲಿ ಹಾಗೂ ಅವರ ನಿರ್ಣಯಗಳಿಂದ ಅರ್ಜಿದಾರರು ಬಾಧಿತರಾದಲ್ಲಿ, ಅಪೀಲು

ಕಾರ್ಯ ವಿಧಾನಕ್ಕೆ ಈಗಾಗಲೇ ಸೂಕ್ತ ಶಾಸನಗಳನ್ನು ಉಪಬಂಧಿಸಲಾಗಿದೆ ಮತ್ತು ಅವರ ಕುಂದುಕೊರತೆಗಳ ನಿವಾರಣೆಗಾಗಿ ವೇದಿಕೆಗಳನ್ನು ಕಲ್ಪಿಸಲಾಗಿದೆ ಹಾಗೂ ಅಂತಿಮವಾಗಿ ನ್ಯಾಯಾಧಿಕರಣದ ಮೊರೆ ಹೋಗಲು ವೇದಿಕೆಗಳನ್ನು ಒದಗಿಸಲಾಗಿದೆ.

14. ಆದುದರಿಂದ, ಅರ್ಜಿದಾರರು ಸದರಿ ನ್ಯಾಯಾಧಿಕರಣಕ್ಕೇ ಮೊರೆ ಹೋಗಲು ಮತ್ತು ಮೇಲೆ ಹೇಳಿದ, ಇತ್ಯರ್ಥದಲ್ಲಿರುವ ಅಪೀಲಿನಲ್ಲಿ ತಮ್ಮನ್ನು ಪಕ್ಷಕಾರರನ್ನಾಗಿ ಸೇರಿಸಿಕೊಳ್ಳುವಂತೆ ಕೋರಲು ವಿವೇಚನಾಯುಕ್ತ ಸಲಹೆ ನೀಡಲಾಗುವುದು. ವಿಷಯದಲ್ಲಿ ಅವರ ಅಹವಾಲನ್ನು ಆಲಿಸುವುದು ಅಗತ್ಯವೆಂದು, ಅವರ ಪ್ರಾಮಾಣಿಕತೆ ಮತ್ತು ಅಹವಾಲು ಹೇಳಿಕೊಳ್ಳುವ ಹಕ್ಕಿನ ಬಗ್ಗೆ ಮಾನ್ಯ ನ್ಯಾಯಾಧಿಕರಣಕ್ಕೆ ತೃಪ್ತಿಯಾದಲ್ಲಿ, ಸದರಿ ಅಪೀಲುಗಳಲ್ಲಿ ಪಕ್ಷಕಾರರನ್ನಾಗಿ ಅವರನ್ನು ಸೇರಿಸಿಕೊಳ್ಳುವ ಸ್ವಾತಂತ್ರ್ಯ ನ್ಯಾಯಾಧಿಕರಣಕ್ಕಿದೆ ಹಾಗೂ ದೂರುದಾರರಾಗಿ ಈಗಿನ ಅರ್ಜಿದಾರರು ತಮ್ಮ ಸಾಕ್ಷ್ಯವನ್ನು ಹಾಗೂ ಕುಂದುಕೊರತೆಯನ್ನು ಸದರಿ ನ್ಯಾಯಾಧಿಕರಣದ ಮುಂದಿಡಬಹುದು.

15. ಇದಕ್ಕೆ ಪರ್ಯಾಯವಾಗಿ, ಅವರು ಬಿಬಿಎಂಪಿ ಮತ್ತು ಬಿಡಿಎ ಅಥವಾ ಪಟ್ಟಣ ಯೋಜನಾ ಪ್ರಾಧಿಕಾರದಂಥ ಸಂಬಂಧಪಟ್ಟ ಸಾರ್ವಜನಿಕ ಪ್ರಾಧಿಕಾರಗಳಿಗೇ ಮೊದಲ ಆದ್ಯತೆ ನೀಡಲು ಸಹ ನ್ಯಾಯಾಧಿಕರಣವು ಅವರಿಗೆ ನಿರ್ದೇಶಿಸಬಹುದು.

16. ಒಂದು ವೇಳೆ, ಇಲಾಖಾ ಪ್ರಾಧಿಕಾರಗಳು ಅಥವಾ ನ್ಯಾಯಾಧಿಕರಣದಂಥ, ಸತ್ಯಾಸತ್ಯತೆಯನ್ನು ನಿರ್ಧರಿಸುವ ಸಂಸ್ಥೆಯು ಅಂಥ ಕ್ರಮವನ್ನು ಕೈಗೊಂಡಾಗ ಮತ್ತು ಅರ್ಜಿದಾರರು ಅವರ ನಿರ್ಣಯಗಳೊಂದಿಗೆ ಅಸಮಾಧಾನ ಹೊಂದಿದ್ದಾಗ, ಅವರು ಪ್ರತ್ಯೇಕವಾಗಿ ಪ್ರತಿಯೊಬ್ಬ ಖಾಸಗಿ ಪ್ರತ್ಯರ್ಜಿದಾರರು–ನಿರ್ಮಾಣಕಾರರ ವಿರುದ್ಧ ಸಿವಿಲ್ ದಾವೆಗಳನ್ನು ಪ್ರತ್ಯೇಕವಾಗಿ ಹೂಡಲೂಬಹುದು ಮತ್ತು ಬಿಬಿಎಂಪಿ ಹಾಗೂ ಬಿಡಿಎ ಮುಂತಾದ ಸಾರ್ವಜನಿಕ ಪ್ರಾಧಿಕಾರಗಳನ್ನೂ ಸಹ ಪ್ರತಿವಾದಿಗಳನ್ನಾಗಿ ದಾವೆಗೆ ಸೇರಿಸಿಕೊಳ್ಳಬಹುದು.

17. ಹಾಗಿದ್ದರೂ, ಮೇಲೆ ಹೇಳಿದ ದೃಷ್ಟಿಯಿಂದ, ಈ ನ್ಯಾಯಾಲಯವು ಈ ಪ್ರಕರಣದೊಂದಿಗೆ ಮತ್ತು ಈ ಸ್ವರೂಪದ ಮೊಕದ್ದಮೆಗಳೊಂದಿಗೆ, ಮುಂದುವರೆಯಲು ಇಚ್ಛಿಸುವುದಿಲ್ಲ ಹಾಗೂ ಈ ರೀತಿಯ ರಿಟ್ ಅರ್ಜಿಗಳು ಸಮರ್ಥನೀಯವಲ್ಲವೆಂದು ತೀರ್ಮಾನಿಸಿರುತ್ತದೆ. ಆದುದರಿಂದ, ಈ ರಿಟ್ ಅರ್ಜಿಗಳು ವಜಾ ಮಾಡಲು ತಕ್ಕದ್ದಾಗಿವೆ ಹಾಗೂ ತದನುಸಾರವಾಗಿ, ಅವುಗಳನ್ನು ವಜಾ ಮಾಡಲಾಗಿದೆ. ಯಾವುದೇ ವೆಚ್ಚಗಳಿಲ್ಲ.